ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಒಟ್ಟು ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ 133

ಇವರ ಜಾತಿ ವಿವರಗಳು ಈಗ ಸದ್ಯಕ್ಕೆ ಲಭ್ಯವಿರುವುದಿಲ್ಲ.

ಆ) ನೇರವಾಗಿ ಐಎಫ್‌ಎಸ್‌ಗೆ ನೇಮಕಾತಿ ಆದವರು 97

ಬಡ್ತಿ ಮೂಲಕ ಐಎಫ್‌ಎಸ್ ಪಡೆದವರು 36

ಇ) ಕರ್ನಾಟಕ ರಾಜ್ಯ ಐಎಫ್‌ಎಸ್ ಅಧಿಕಾರಿಗಳು 88

ಇತರೆ ರಾಜ್ಯಗಳಿಂದ ಆಯ್ಕೆಯಾಗಿ ಕರ್ನಾಟಕ ರಾಜ್ಯದಲ್ಲಿ ಐಎಫ್‌ಎಸ್ ಅಧಿಕಾರಿಗಳಾಗಿರುವವರು 45

ಕಾವೇರಿ ಜಲವಿವಾದದ ಬಗ್ಗೆ

24 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾವೇರಿ ಜಲವಿವಾದದ ಬಗ್ಗೆ ಪ್ರಸ್ತುತ ರಾಜ್ಯ ಸರ್ಕಾರದ ನಿಲುವುಗಳೇನು?

ಆ) ತಾರೀಖು 25-6-1991ರ ಮಧ್ಯಂತರ ಅಜ್ಜಿ ಮತ್ತು 3-4-1992ರ ಪುನರ್ ಪರಿಶೀಲನಾ ಅರ್ಜಿ ಆಧಾರದ ಮೂಲಕ ಬಂದ ಕಾವೇರಿ ಜಲಮಂಡಲಿಯ ತೀರ್ಪಿನ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು?

ಇ) ನ್ಯಾಯಮಂಡಲಿಯನ್ನು ಬಹಿಷ್ಕರಿಸಲು ಸರ್ಕಾರ ನಿರ್ಧರಿಸಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ನ್ಯಾಯಮಂಡಲಿಯ ಮುಂದೆ, ರಾಜ್ಯದ ವಾದದ ಸಕ್ರಿಯ ಮಂಡನೆ ಮತ್ತು ಮಾತುಕತೆಯಿಂದ ವಿವಾದ ಬಗೆಹರಿಸುವುದರಲ್ಲಿ ತೀವ್ರ ಪ್ರಯತ್ನ..

ಆ) ಪರಿಸ್ಥಿತಿಗೆ ಅನುಗುಣವಾದ ಸೂಕ್ತ ಕ್ರಮ.

ಇ) ಇಲ್ಲ.

ಈ) ನ್ಯಾಯಮಂಡಲಿಯ ಬಹಿಷ್ಕಾರಕ್ಕೆ ರಾಜ್ಯದ ಹಿತದೃಷ್ಟಿಯಿಂದ ಇದು ಸೂಕ್ತ ಸಮಯವಲ್ಲ.

ರಾಜ್ಯದಲ್ಲಿ ಖಾಸಗಿಯವರಿಂದ ವಿದ್ಯುತ್ ಉತ್ಪಾದನೆ

25 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಖಾಸಗಿಯವರ ಮತ್ತು ವಿದೇಶಿ ಮೂಲಕ ಬಂಡವಾಳದೊಂದಿಗೆ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವುದಾಗಿ ಹಿಂದಿನ ಸರ್ಕಾರ ಪ್ರಕಟಿಸಿದ್ದು ಇಂತಹ ಎಷ್ಟು ಯೋಜನೆಗಳನ್ನು ಇದುವರೆಗೂ ಕೈಗೊಳ್ಳಲಾಗಿದೆ.

ಆ) ಈ ಯೋಜನೆಗಳಲ್ಲಿ ಆಳವಡಿಸಲಾದ ಖಾಸಗಿಯವರ ಮತ್ತು ವಿದೇಶಿ ಬಂಡವಾಳ ಎಷ್ಟು? ಮತ್ತು ಆ ಸಂಸ್ಥೆಗಳು ಯಾವುವು?

ಇ) ಈ ಯೋಜನೆಯಿಂದ ಉತ್ಪತ್ತಿಯಾಗುವ ಒಟ್ಟು ವಿದ್ಯುತ್ ಪ್ರಮಾಣ ಎಷ್ಟು? (ಯೋಜನಾವಾರು ಉತ್ಪಾದನಾ ವಿವರಗಳನ್ನು ಕೊಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :